# ಕರ್ನಾಟಕ ಸರ್ಕಾರ

**ಆಯುಕ್ತರ ಕಾರ್ಯಾಲಯ, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ, 4ನೇ ಮಹಡಿ, ಮಿಂಟೋ ಶ್ರೀ ಆಂಜನೇಯ ಭವನ, ಆಲೂರು ವೆಂಕಟರಾವ್ ರಸ್ತೆ, ಚಾಮರಾಜಪೇಟೆ, ಬೆಂಗಳೂರು -18, ದೂರವಾಣಿ:26709689/ 26706775, Email: endowmentcommissioner@gmail.com.**


ಸಂಖ್ಯೆ: HRICE-ADM0ADM8/180/2024/ಇ-1426188 ದಿನಾಂಕ:-21.08.2024.

**-: ಪ್ರಕಟಣೆ :-**

ಧಾರ್ಮಿಕ ದತ್ತಿ ಇಲಾಖೆಯ ಆಡಳಿತಕ್ಕೆ ಒಳಪಡುವ ರಾಜ್ಯದಲ್ಲಿನ 'ಎ' ಪ್ರವರ್ಗದ ಈ ಕೆಳಕಂಡ 01 ಅಧಿಸೂಚಿತ ಸಂಸ್ಥೆಗೆ ವ್ಯವಸ್ಥಾಪನಾ ಸಮಿತಿಯನ್ನು ರಚಿಸುವ ಕುರಿತು ಆಸಕ್ತ ಭಕ್ತಾಧಿಗಳು/ಸಾರ್ವಜನಿಕರಿಂದ ಸದಸ್ಯತ್ವಕ್ಕೆ ಅರ್ಜಿ ಸಲ್ಲಿಸಲು ತಿಳಿಸಿ ದಿನಾಂಕ:20.02.2020, 30.04.2020, 02.06.2020, 21.01.2021, 17.01.2022, 19.01.2021, 02.03.2023 ಮತ್ತು ದಿನಾಂಕ:06.11.2024ರಂದು ಪ್ರಕಟಣೆ ಹೊರಡಿಸಲಾಗಿದ್ದು, ಆದರೆ ಕೆಲವು ದೇವಾಲಯಗಳಿಗೆ ವ್ಯವಸ್ಥಾಪನಾ ಸಮಿತಿ ರಚಿಸುವಂತೆ ಕೋರಿ ಹೊಸದಾಗಿ ಹಲವಾರು ಮನವಿಗಳು ಸ್ವೀಕೃತವಾಗುತ್ತಿರುವುದರಿಂದ ಸದರಿ ದೇವಾಲಯಗಳಿಗೆ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ಅಧಿನಿಯಮ 2011ರ ಕಲಂ 25 ಅನ್ವಯ ವ್ಯವಸ್ಥಾಪನಾ ಸಮಿತಿಗಳನ್ನು ರಚಿಸಲು ಅರ್ಜಿಗಳನ್ನು ಆಹ್ವಾನಿಸಿ ಮರು ಪ್ರಕಟಣೆಯನ್ನು ಹೊರಡಿಸಲು ದಿನಾಂಕ:06.07.2024ರಂದು ನಡೆದ 4ನೇ ರಾಜ್ಯ ಧಾರ್ಮಿಕ ಪರಿಷತ್ತಿನ 5ನೇ ಸಭೆಯ ವಿಷಯಸೂಚಿ 5(ಅ) ರಂತೆ ತೀರ್ಮಾನಿಸಲಾಗಿರುತ್ತದೆ.

| ಕ್ರ ಸಂ | ಜಿಲ್ಲೆ | ಕ್ರ ಸಂ | ದೇವಸ್ಥಾನದ ಹೆಸರು ವಿಳಾಸ |
|---|---|---|---|
| 1. | ಕೊಡಗು | 1. | ಶ್ರೀ ಓಂಕಾರೇಶ್ವರ ದೇವಾಲಯ, ಮಡಿಕೇರಿ ನಗರ. |

ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿದ್ದ ರಿಟ್ ಅರ್ಜಿ ಸಂಖ್ಯೆ:24096/2023 ಮತ್ತು 24682/2023ರ ಪ್ರಕರಣಗಳಲ್ಲಿ ದಿನಾಂಕ:14.06.2024ರಂದು ಮಾನ್ಯ ಉಚ್ಚ ನ್ಯಾಯಾಲಯವು ನೀಡಿರುವ ತೀರ್ಪನ್ನು ಗಮನದಲ್ಲಿರಿಸಿಕೊಂಡು ಧಾರ್ಮಿಕ ದತ್ತಿ ಇಲಾಖಾ ಆಡಳಿತಕ್ಕೆ ಒಳಪಡುವ ಈ ಕೆಳಕಂಡ ಪ್ರವರ್ಗ 'ಎ' ಅಧಿಸೂಚಿತ ಸಂಸ್ಥೆಗಳಿಗೆ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ಅಧಿನಿಯಮ 2011ರ ಕಲಂ 25 ಅನ್ವಯ ವ್ಯವಸ್ಥಾಪನಾ ಸಮಿತಿಗಳನ್ನು ರಚಿಸಲು ಅರ್ಜಿಗಳನ್ನು ಆಹ್ವಾನಿಸಿ ಮರು ಪ್ರಕಟಣೆಯನ್ನು ಹೊರಡಿಸಲು ದಿನಾಂಕ:15.07.2024ರಂದು ನಡೆದ 4ನೇ ರಾಜ್ಯ ಧಾರ್ಮಿಕ ಪರಿಷತ್ತಿನ 6ನೇ ಸಭೆಯ ವಿಷಯ ಸೂಚಿ (1) ಮತ್ತು (2)ರಂತೆ ತೀರ್ಮಾನಿಸಲಾಗಿರುತ್ತದೆ.

| ಕ್ರ ಸಂ | ಜಿಲ್ಲೆ | ಕ್ರ ಸಂ | ದೇವಸ್ಥಾನದ ಹೆಸರು ವಿಳಾಸ |
|---|---|---|---|
| 1. | ಬೆಂಗಳೂರು ನಗರ | 1. | ಶ್ರೀ ಬನಶಂಕರಿ ದೇವಾಲಯ, ಎಸ್.ಕರಿಯಪ್ಪ ರಸ್ತೆ, ಬೆಂಗಳೂರು. |
| 2. | ಕೋಲಾರ | 2. | ಶ್ರೀ ಘತೇಶ್ವರ ಭೈರವೇಶ್ವರ ದೇವಸ್ಥಾನ, ಸೀತಿಬೆಟ್ಟ, ಕೋಲಾರ ತಾಲ್ಲೂಕು. |

ದಿನಾಂಕ:03.01.2024ರಂದು ನಡೆದ 4ನೇ ರಾಜ್ಯ ಧಾರ್ಮಿಕ ಪರಿಷತ್ತಿನ 2ನೇ ಸಭೆಯ ವಿಷಯ ಸೂಚಿ (8)ರಲ್ಲಿನ ತೀರ್ಮಾನದಂತೆ, ಈ ಕೆಳಕಂಡ ದೇವಾಲಯಕ್ಕೆ ರಚಿಸಲಾಗಿರುವ ವ್ಯವಸ್ಥಾಪನಾ ಸಮಿತಿಯ ಸಾಮಾನ್ಯ ಸ್ಥಾನದ ಸದಸ್ಯರೊಬ್ಬರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಸದಸ್ಯರನ್ನು ಭರ್ತಿ ಮಾಡಲು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ಅಧಿನಿಯಮ 2011ರ ಕಲಂ 25 ಅನ್ವಯ ವ್ಯವಸ್ಥಾಪನಾ ಸಮಿತಿಗಳನ್ನು ರಚಿಸಲು ಸಾಮಾನ್ಯ ಸ್ಥಾನಕೆ ಅರ್ಜಿಗಳನ್ನು ಆಹ್ವಾನಿಸಿ ಮರು ಪ್ರಕಟಣೆಯನ್ನು ಹೊರಡಿಸಲಾಗಿದೆ.

| ಕ್ರ ಸಂ | ಜಿಲ್ಲೆ | ಕ್ರ ಸಂ | ದೇವಸ್ಥಾನದ ಹೆಸರು ವಿಳಾಸ |
|---|---|---|---|
| 1. | ಹಾಸನ | 1. | ಶ್ರೀ ಚನ್ನಕೇಶವ ದೇವಾಲಯ, ಬೇಲೂರು ತಾಲ್ಲೂಕು. |

ರಾಜ್ಯ ಧಾರ್ಮಿಕ ಪರಿಷತ್ತಿನ ವಿವಿಧ ದಿನಾಂಕಗಳಂದು ನಡೆದ ಸಭೆಗಳ ನಿರ್ಣಯಗಳಂತೆ ಈ ಮೇಲ್ಕಂಡಂತೆ ಒಟ್ಟು 04 "ಎ" ಪ್ರವರ್ಗದ ದೇವಾಲಯಗಳಿಗೆ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ಅಧಿನಿಯಮ 2011ರ ಸೆಕ್ಷನ್ 25 ರನ್ವಯ ವ್ಯವಸ್ಥಾಪನಾ ಸಮಿತಿಯನ್ನು ರಚಿಸಲು ಆಸಕ್ತ ಭಕ್ತಾಧಿಗಳಿಂದ/ಸಾರ್ವಜನಿಕರಿಂದ ಅರ್ಜಿಗಳನ್ನು ಆಹ್ವಾನಿಸಿ ಪ್ರಕಟಣೆ ಹೊರಡಿಸಲಾಗಿದೆ.

ಸದರಿ ದೇವಾಲಯಗಳ ವ್ಯವಸ್ಥಾಪನಾ ಸಮಿತಿಗೆ ಕನಿಷ್ಟ 25 ವರ್ಷಕ್ಕಿಂತ ಮೇಲ್ಪಟ್ಟ ಆಸಕ್ತ ಭಕ್ತಾಧಿಗಳು ಸದಸ್ಯತ್ವ ಕೋರಿ ಅರ್ಜಿಯನ್ನು ನಿಗಧಿ'ತ ನಮೂನೆ-1(ಬಿ)(22ನೇ ನಿಯಮ) ನಮೂನೆಯಲ್ಲಿ ಭರ್ತಿ ಮಾಡಿ, ಅರ್ಜಿಯನ್ನು ದಿನಾಂಕ:10.09.2024 ರೊಳಗಾಗಿ **"ಆಯುಕ್ತರು, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ, ಮಿಂಟೋ ಶ್ರೀ ಆಂಜನೇಯ ಭವನ, ಆಲೂರು ವೆಂಕಟರಾವ್ ರಸ್ತೆ, ಚಾಮರಾಜಪೇಟೆ,ಬೆಂಗಳೂರು-560018"** ಇಲ್ಲಿಗೆ ನೇರವಾಗಿ ಸಲ್ಲಿಸತಕ್ಕದ್ದು, ಅಂತಹ ಅರ್ಜಿಗಳನ್ನು ಮಾತ್ರ ಪರಿಗಣಿಸಲಾಗುವುದು, ನಿಗಧಿತ ಅವಧಿಯ ನಂತರದಲ್ಲಿ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. (ನಿಗಧಿತ ಅರ್ಜಿ ನಮೂನೆಯ ಎಲ್ಲಾ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಮತ್ತು www.itms.kar.gov.in ನಲ್ಲಿ ಲಭ್ಯವಿರುತ್ತದೆ.

2.1/8/24

**ಆಯುಕ್ತರು,**
**ಧಾರ್ಮಿಕ ದತ್ತಿ ಇಲಾಖೆ, ಬೆಂಗಳೂರು.**

# ನಮೂನೆ 1(ಬಿ)

# 22ನೇ ನಿಯಮ

_____________________ಜಿಲ್ಲೆಯ________________ತಾಲ್ಲೂಕಿನ______________ಗ್ರಾಮದ ಶ್ರೀ__________________ದೇವಾಲಯ/ಸಂಸ್ಥೆಯ ವ್ಯವಸ್ಥಾಪನಾ ಸಮಿತಿಯ ಸದಸ್ಯತ್ವಕ್ಕಾಗಿ ಅರ್ಜಿ

ಇವರಿಗೆ
ಕಾರ್ಯದರ್ಶಿಗಳು,
ಕರ್ನಾಟಕ ಧಾರ್ಮಿಕ ಪರಿಷತ್ತು 'ಮತ್ತು ಆಯುಕ್ತರು, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ,
ಮಿಂಟೋ ಶ್ರೀ ಆಂಜನೇಯ ಭವನ, ಆಲೂರು ವೆಂಕಟರಾವ್ ರಸ್ತೆ, ಚಾಮರಾಜಪೇಟೆ, ಬೆಂಗಳೂರು –560018

ಭಾವ ಚಿತ್ರ

| | | | |
|---|---|---|---|
| 1. | ಅರ್ಜಿದಾರರ ಹೆಸರು ಮತ್ತು ಪೂರ್ಣ ವಿಳಾಸ (ಆಧಾರ ಕಾರ್ಡ ಪ್ರತಿ ಲಗತ್ತಿಸುವುದು) | : | |
| 2. | ತಂದೆಯ/ಗಂಡನ ಹೆಸರು | : | |
| 3. | ವಯಸ್ಸು ಮತ್ತು ಹುಟ್ಟಿದ ದಿನಾಂಕ | : | |
| 4. | ವಿದ್ಯಾರ್ಹತೆ | : | |
| 5. | ಧರ್ಮ/ಜಾತಿ | : | |
| 6. | ನಾಮ ನಿರ್ದೇಶನಕ್ಕಾಗಿ ಅರ್ಜಿದಾರರು ಅರ್ಜಿಯನ್ನು ಸಲ್ಲಿಸುವ ಪ್ರವರ್ಗ (ಸಾಮಾನ್ಯ/ಅ.ಜಾ/ಅ.ಬು/ಮಹಿಳೆ/ಅರ್ಚಕ) (ಅ.ಜಾ/ ಅ.ಬುಪ್ರಕರಣಗಳಲ್ಲಿ ತಹಶೀಲ್ದಾರರು ನೀಡಿರುವ ಪ್ರಮಾಣ ಪತ್ರವನ್ನು ಲಗತ್ತಿಸುವುದು) | : | |
| 7. | ನ್ಯಾಯಾಲಯದಿಂದ ಅತನನ್ನು ಅವಿಮುಕ್ತ ದಿವಾಳಿಯೆಂದು ಘೋಷಿಸಲಾಗಿದೆಯೇ? ಅಥವಾ ಅತನು ಅನೈತಿಕ ಅಧಃ ಪತನವನ್ನು ಒಳಗೊಂಡಿರುವ ಅಪರಾಧಕ್ಕಾಗಿ ಅತನಿಗೆ ಶಿಕ್ಷೆಯನ್ನು ವಿಧಿಸಲಾಗಿದೆಯೇ? | : | |
| 8. | ಅತನು ಅಸ್ವಸ್ಥ ಚಿತ್ತನಾಗಿದ್ದಾನೆಯೇ ಮತ್ತು ಹಾಗೆಂದು ಸಕ್ಷಮ ನ್ಯಾಯಾಲಯದಿಂದ ಘೋಷಿಸಲಾಗಿದೆಯೇ? ಅಥವಾ ಆತನು ಕಿವುಡ ಅಥವಾ ಮೂಕನಾಗಿದ್ದಾನೆಯೇ? ಅಥವಾ ಕುಷ್ಠರೋಗ ಅಥವಾ ಯಾವುದೇ ಸಾಂಕ್ರಾಮಿಕ ಅಥವಾ ಗಂಭೀರ ಖಾಯಿಲೆಗಳಿಂದ ಬಳಲುತ್ತಿದ್ದಾನೆಯೇ? ಹಾಗಿದ್ದಲ್ಲಿ ವೈದ್ಯಕೀಯ ಅರ್ಹತಾ ಪ್ರಮಾಣ ಪತ್ರವನ್ನು ಸಲ್ಲಿಸುವುದು. | : | |

| | | | |
|---|---|---|---|
| 9. | ಅತನು ಯಾವುದೇ ಸಮಯದಲ್ಲಿ ಸಂಸ್ಥೆಯ ಹಿತಾಸಕ್ತಿಗೆ ವಿರುದ್ಧವಾಗಿ ವರ್ತಿಸಿದ್ದಾನೆಯೇ? | : | |
| 10. | ಅತನು ಅಂತಹ ಸಂಸ್ಥೆಯ (ಅರ್ಚಕತನವನ್ನು ಹೊರತುಪಡಿಸಿ) ಪದದಾರಕನಾಗಿದ್ದಾನೆಯೇ? ಅಥವಾ ಅದಕ್ಕೆ ಸಂಬಂಧಿಸಿದಂತೆ ನೌಕರನಾಗಿದ್ದಾನೆಯೇ? ಅಥವಾ ಅವರಿಂದ ಯಾವುದೇ ಸಂಸ್ಥೆಯಿಂದ ಯಾವುದೇ ವೇತನ ಅಥವಾ ಉಪಲಬ್ಧಿಗಳು ಅಥವಾ ಸವಲತ್ತುಗಳನ್ನು ಸ್ವೀಕರಿಸುತ್ತಿದ್ದಾನೆಯೇ? | : | |
| 11. | ಅರ್ಜಿದಾರನು ಯಾವುದೇ ಇತರ ಅಧಿಸೂಚಿತ ಸಂಸ್ಥೆಗಳ ವ್ಯವಸ್ಥಾಪನಾ ಸಮಿತಿಯ ಸದಸ್ಯನಾಗಿದ್ದಾನೆಯೇ? ಹಾಗಿದ್ದಲ್ಲಿ ವಿವರಗಳನ್ನು ಒದಗಿಸುವುದು | : | |
| 12. | ಧಾರ್ಮಿಕ ಕ್ಷೇತ್ರಕ್ಕೆ ಅರ್ಜಿದಾರನು ಸಲ್ಲಿಸಿದ ಸೇವೆಗಳು ಯಾವುದಾರೂ ಇದ್ದಲ್ಲಿ | : | |

ಅರ್ಜಿದಾರರ ಸಹಿ

**:ಘೋಷಣೆ:**

________________________ರವರ ಮಗನಾದ_____________ಎಂಬ ನಾನು ಮೇಲೆ ಒದಗಿಸಿದ ಮಾಹಿತಿಯು ನನ್ನ ತಿಳುವಳಿಕೆಯ ಪ್ರಕಾರ ಸತ್ಯವಾಗಿದೆಯೆಂದು ಈ ಮೂಲಕ ಘೋಷಿಸುತ್ತೇನೆ ಮತ್ತು ಯಾವುದೇ ಮಾಹಿತಿಯಯ ಸತ್ಯವಲ್ಲವೆಂದು ಕಂಡು ಬಂದಲ್ಲಿ ನನ್ನನ್ನು ವ್ಯವಸ್ಥಾಪನಾ ಸಮಿತಿಯ ಸದಸ್ಯತ್ವದಿಂದ ತೆಗೆದುಹಾಕಬಹುದಾಗಿದೆ.

ದಿನಾಂಕ:

ಅರ್ಜಿದಾರರ ಸಹಿ